ಸಾಕ್ಷಿಯನ್ನು ದಿನಾಂಕಃ 08.09.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ- ಪ್ರತಿ ವಾದಿಯ ಪರ ಶ್ರೀ. ಪಿ ಎಂ ಎಸ್ ವಕೀಲರಿಂದ.**

ದಿನಾಂಕ 3.12.1986 ರ ಕ್ರಯ ಪತ್ರವನ್ನು ನಿಡಿ 2 ಎಂದು ದಿನಾಂಕ 26.02.1991 ರ ಕ್ರಯ ಪತ್ರ ವನ್ನು ನಿಡಿ 3 ಎಂದು , 3 ಪಹಣಿಗಳ ದೃಡೀಕೃತ ನಕಲುಗಳನ್ನು ನಿಡಿ 4 ರಿಂದ 6 ಎಂದು , 10 ಪಹಣಿಗಳನ್ನು ನಿಪಿ 7 ರಿಂದ 16 ಎಂದು , 2 ಎಂ ಅರ್ ಗಳನ್ನು ನಿಡಿ 17 ಮತ್ತು 18 ಎಂದು , 2 ಋಣಬಾರ ರಾಹಿತ್ಯ ಪತ್ರಗಳನ್ನು ನಿಡಿ 19 ಮತ್ತು 20 ಎಂದು , ಅಸೆಸ್ ಮೆಂಟ್ ದೃಡೀಕೃತ ನಕಲನ್ನು ನಿಡಿ 21 ಎಂದು , ಡಿಮ್ಯಾಂಡ್ ರಿಜಿಸ್ಟರ್ ನ ದೃಡೀಕೃತ ನಕಲು ನಿಡಿ 22 ಎಂದು , ಪಟ್ಟಾ ಮತ್ತು ರಶೀದಿ ಪುಸ್ತಕ ನಿಡಿ 23 ಎಂದು , 3 ಕಂದಾಯ ರಶೀದಿಗಳನ್ನುನಿಡಿ 24 ರಿಂದ 26 ಎಂದು , 4 ಕಂದಾಯ ರಶೀದಿಗಳ ದೃಡೀಕೃತ ನಕಲುಗಳನ್ನು ನಿಡಿ 27 ರಿಂದ 30 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ- ವಾದಿ ಪರ ಶ್ರೀ. ಪಿ ಎನ್ ವಕೀಲರಿಂದ**

ಈ ದಾವಾವನ್ನು ಯಾರು ಯಾರ ವಿರುದ್ಧ ಹಾಕಿರುತ್ತಾರೆ ಎಂದರೆ ವಾದಿ ಈ ದಾವೆಯನ್ನು ನನ್ನ ತಂದೆಯ ವಿರುದ್ಧ ಹಾಕಿರುತ್ತಾರೆ. ಈ ದಾವೆಯನ್ನು ಸರ್ವೆ ನಂಬರ್ ಅಥವಾ ಪಂಚಾಯಿತಿ ಖಾತೆ ಯಾವುದರ ಮೇಲೆ ಹಾಕಿರುತ್ತಾರೆ ಎಂದರೆ ಸರ್ವೆ ನಂಬರಿನ ಮೇಲೆ ಹಾಕಿರುತ್ತಾರೆ ಸದರಿ ಸರ್ವೆ ನಂ 389/1 ಅಗಿರುತ್ತದೆ. ದಾವಾ ಅಸ್ತಿ ಮೂಲತಃ ಯಾರಿಗೆ ಸೇರಿದ್ದು ಎಂದರೆ ಅಲಿಮಾ ಬೀ ಉರುಪ್ ಪ್ಯಾರಿಜಾನ್ ಉರುಪ್ ಜೋಟಿಮಾ ಬೀ ರವರಿಗೆ ಸೇರಿರುತ್ತದೆ. ಸದರಿ ಅಲಿಮಾ ಬೀ ಉರುಪ್ ಪ್ಯಾರಿಜಾನ್ ಉರುಪ್ ಜೋಟಿಮಾ ಬೀ ವಾದಿಯ ತಂದೆಯ ಸೋದರಿ ಎಂದರೆ ಸರಿ . ಸದರಿ ಅಲಿಮಾ ಬೀ ಉರುಪ್ ಪ್ಯಾರಿಜಾನ್ ಉರುಪ್ ಜೋಟಿಮಾ ಬೀ ರವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ . ಅಗಾಗಿ ಸದರಿ ಅಲಿಮಾ ಬೀ ರವರನ್ನು ವಾದಿಯ ತಂದೆಯೇ ಪೋಷಣೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಅಲಿಮಾ ಬೀ ರವರ ಗಂಡನು ಸಹ ಮೃತಪಟ್ಟಿದ್ದರು ಎಂದರೆ ಸರಿ . ಅಗಾಗಿ ಸದರಿ ಅಲಿಮಾ ಬೀ ರವರು ಅಕೆಯ ಅಣ್ಣನ ಅಶ್ರಯದಲ್ಲಿಯೇ ಇದ್ದರು ಎಂದರೆ ಸರಿಯಲ್ಲ. ಈ ಕಾರಣಕ್ಕಾಗಿ ಅಲಿಮಾ ಬೀ ರವರ ಹೆಸರಿನಲ್ಲಿ ಇದ್ದ ದಾವಾ ಐಟಂ ನಂ 1 ನ್ನು ವಾದಿಯ ತಂದೆ ಹಾಗೂ ತಾಯಿಗೆ ದಿನಾಂಕ 19.05.1984 ರಂದು ನಿಪಿ 1 ವಿಲ್ ಮೂಲಕ ಬರೆದುಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ.

ವಾದಿಯ ತಂದೆಯ ಹೆಸರು ಅಮೀರ್ ಸಾಬಿ ಎಂದರೆ ಸರಿ .ವಾದಿಯ ತಾಯಿಯ ಹೆಸರು ರಜೀಯಾ ಬೇಗಂ ಎಂದರೆ ಸರಿ . ನಿಪಿ 1 ನ್ನು ಬರೆದುಕೊಟ್ಟಾಗಿನಿಂದಲೂ ವಾದಿಯ ತಂದೆ ತಾಯಿಯು ದಾವಾ ಐಟಂ ನಂ 1 ರಲ್ಲಿ ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ ನಾವು ಸ್ವಾಧೀನ ಇರುತ್ತೇವೆ. ನನ್ನ ತಂದೆಯ ಮೂಲ ಗ್ರಾಮ ಶ್ರೀನಿವಾಸಪುರ ತಾಲೂಕಿನ ಮುದುಕಪಲ್ಲಿ ಗ್ರಾಮ. ಸದರಿ ಗ್ರಾಮದಿಂದ ನಾವು ವ್ಯಾಪಾರಕ್ಕಾಗಿ ಬಂದಿರುತ್ತೇವೆ ಎಂದರೆ ಸರಿಯಲ್ಲ. ಅಲೀಮಾ

ಬೀ ರವರು ದಿನಾಂಕ 26.07.1985 ರಲ್ಲಿ ಮೃತ ಪಟ್ಟಿರುತ್ತಾರೆ ಎಂದರ ಸರಿಯಲ್ಲ 1991 ರಲ್ಲಿ ಮೃತಪಟ್ಟಿರುತ್ತಾರೆ. ನಿಪಿ 12 ರಂತೆ ಅಲೀಮಾ ಬೀ ರವರ ಮರಣ ಪ್ರಮಾಣ ಪತ್ರ ನೀಡಿಲಾಗಿದೆ ಎಂದರೆ ಸರಿಯಲ್ಲ. ದಿನಾಂಕ 3.12.1986 ರಲ್ಲಿ ಅಪರಿಚಿತ ವ್ಯಕ್ತಿಯನ್ನು ಕರೆದುಕೊಂಡು ಹೋಗಿ ಕ್ರಯ ಪತ್ರ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ವಿಚಾರ ನಿಮ್ಮ ತಂದೆಗೆ ಗೊತ್ತಿದ್ ದು ಜಿ ಪಿ ಎ ದಾರರಾಗಿರುವ ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಿನಾಂಕ 3.12.1986 ರಲ್ಲಿ ನಾನು ಚಿಕ್ಕವನಾಗಿದ್ದ ಕಾರಣ ನನಗೆ ಯಾವುದೇ ವಿಚಾರಗಳು ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಡಿ 2 ನ್ನು ನಿಮ್ಮ ತಂದೆ ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ.

ನಿಡಿ 3 ದಾವಾ ಐಟಂ ನಂ 2 ಕ್ಕೆ ಸಂಬಂದಪಟ್ಟಿದ್ದು ಎಂದರೆ ಸರಿ . ಸದರಿ ಅಸ್ತಿಯು ಮನೆಯಾಗಿದ್ದು ಅದನ್ನು ಇನಾಯತುಲ್ಲಾ ರವರು ನನ್ನ ತಂದೆಗೆ ಬರೆದುಕೊಟ್ಟಿರುತ್ತಾರೆ. ನಿಡಿ 3 ರಲ್ಲಿ ಮನೆ ಎಂದು ನಮೂದಾಗಿದೆಯಾ ಅಥವಾ ನಿವೇಶನವೆಂದು ನಮೂದಾಗಿದೆಯಾ ಎಂದರೆ ಮನೆ ಎಂದು ನಮೂದಾಗಿರುತ್ತದೆ. ನಿಡಿ 3 ರಲ್ಲಿ ನಿವೇಶನ ಎಂದು ನಮೂದು ಇದೆ ಎಂದರೆ ಸರಿಯಲ್ಲ. ನಿಡಿ 3 ರಲ್ಲಿರುವ ಅಸ್ತಿಯ ವಿಸ್ತೀರ್ಣ ಪೂ–ಪಃ 38 ಉ–ದಃ 20 ಅಗಿರುತ್ತದೆ. ನಿಡಿ 3 ನ್ನು ಬರೆದುಕೊಡುವ ಕಾಲಕ್ಕೆ ಇನಾಯತುಲ್ಲಾ ಹೆಸರಿನಲ್ಲಿ ಎಷ್ಟು ವಿಸ್ತೀರ್ಣ ಅಸ್ತಿ ಇತ್ತು ಎಂದರೆ ಗೊತ್ತಿಲ್ಲ. ನಿಡಿ 22 ರಲ್ಲಿ ಚೋಟಿಮಾ ಬೀ ಎಂಬ ಹೆಸರನ್ನು ರೌಂಡ್ ಅಪ್ ಮಾಡಿ ಅದರ ಒಟ್ಟು ವಿಸ್ತೀರ್ಣ ಪೂಪ– 40 ಅಡಿ ಉ–ದಃ 43 ಅಡಿ ಇರುವುದಾಗಿ ನಮೂದಾಗಿದೆ ಎಂದರೆ ಸರಿ . ಸದರಿ ವಿಸ್ತೀರ್ಣ ದಲ್ಲಿ ನಿಮ್ಮ ಹೆಂಡತಿಯ ಹೆಸರಿಗೆ ಪೂಪ– 20 ಅಡಿ ಉ–ದಃ 38 ಅಡಿ ನಮೂದಾಗಿರುತ್ತದೆ ಎಂದರೆ ಸರಿ . ನಿಡಿ 3 ರಂತೆ ಪೂಪ– 20 ಅಡಿ ಉ–ದಃ 38 ಅಡಿ ಹೊರತು ಪಡಿಸಿ ಬೇರೆ ಯಾವುದೇ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿ . ನಿಡಿ 26 ರಂತೆ ನೀವು ಖರೀದಿ ಮಾಡಿರುವ ಅಸ್ತಿಗೆ ಮಾತ್ರ ಕಂದಾಯ ಕಟ್ಟಿರುತ್ತೀರಿ ಎಂದರೆ ಸರಿಯಲ್ಲ. ಒಟ್ಟು ವಿಸ್ತೀರ್ಣದ ಖಾತೆ ಸಂ 17/18 ಎಂದರೆ ಸರಿ . ನಿಮ್ಮಹೆಸರಿಗೆ ಖಾತೆಯಾದಾಗಿ ಕೇವಲ ಖಾತೆ ನಂ 18 ಮಾತ್ರ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಖಾತೆ ನಂ 18 ನಮೂದಿಸಿ ನಿಡಿ 3 ನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ . ನೀವು ಕಂದಾಯವನ್ನು ಎಷ್ಟು ಅಸ್ತಿಗೆ ಕಟ್ಟಿರುತ್ತೀರಿ ಎಂದೆರ 40*43 ಅಡಿಗಳಿಗೆ ಕಟ್ಟಿರುತ್ತೇನೆ. ಸದರಿ 40*43 ಅಡಿಗಳಿಗೆ ಸಂಬಂದಿಸಿದ ದಾಖಲೆಗಳು ನಿಮ್ಮ ಬಳಿ ಇದೆಯಾ ಎಂದರೆ ಗೊತ್ತಿಲ್ಲ. ನಿಡಿ 30 ರ ದಾಖಲೆ ಏನು ಎಂದರೆ ದಾವಾ ಐಟಂ ನಂ 2 ಕ್ಕೆ ಸಂಬಂದಿಸಿದ ರಶೀದಿ .

ಮನೆಗೂ ಹಾಗು ಾನಿಮಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಸದರಿ ಮನೆ ಈಗಲೂ ವಾದಿಯ ತಂದೆಯ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿಯಲ್ಲ. ಸದರಿ ಮನೆಯ ವಿದ್ಯುತ್ ಸಂಪರ್ಕ ಸಂಃ ಎಂ ಬಿ 1669 ಎಂದರೆ ಸರಿ . ಸದರಿ ಸಂಪರ್ಕ ಅಮೀರ್ ಸಾಬ್ ರವರ ಹೆಸರಿನಲ್ಲಿ ಇದೆ ಎಂದರೆ ಸರಿ . ಅದು ಹಳೆಯ ದಾಖಲೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ 2 ಮನೆಗೂ ಹಾಗೂ ನಿಮಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಿಪಿ 18 ರಂತೆ ಡಿ ಜಿ ಪಿ ರವರು ವಾದಿಯೇ ಸ್ವಾಧೀನ ಇರುವುದಾಗಿ ಅಬಿಪ್ರಾಯ ತಿಳಿಸಿರುತ್ತಾರೆ ಎಂದರೆ

ಸರಿಯಲ್ಲ. ನಿಪಿ 18 ರಂತೆ ನಿಮ್ಮ ತಂದೆಗೆ ಮಾರಾಟ ಮಾಡಿ ಉಳಿದ ಅಸ್ತಿಯನ್ನು ವಾದಿಯ ಅಣ್ಣನ ಹೆಸರಿಗೆ ವರ್ಗಾವಣೆ ಮಾಡಬಹುದು ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ 2 ರಲ್ಲಿ ಉಳಿಕೆ 20*38 ಅಡಿ ಸ್ವತ್ತುನ್ನು ವಾದಿಯ ಅಣ್ಣ ಇನಾಯಿತುಲ್ಲಾ ರವರಿಂದ ಖರೀದಿ ಮಾಡಿರುತ್ತೇವೆ ಎಂದರೆ ಸರಿ . ಉಳಿಕೆ ವಿಸ್ತಿರ್ಣ 40*23 ಅಡಿ ವಾದಿಯ ಅಣ್ಣನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಉಳಿಕೆ ವಿಸ್ತೀರ್ಣ ಇರುವುದಿಲ್ಲ. ನಿಡಿ 3 ರಲ್ಲಿ ಚೆಕ್ಕುಬಂದಿಯಲ್ಲಿ ಉತ್ತರಕ್ಕೆ ಚೋಟಿಮಾ ಬೀ ವಠಾರಾ ಎಂದು ಇರುತ್ತದೆ ಎಂದರೆ ಸರಿ , ಸದರಿ ವಠಾರವೇ ವಾದಿಯ ಅಣ್ಣನ ಹೆಸರಿಗೆ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ.

ನಿಡಿ 4 ರಿಂದ 6 ರಲ್ಲಿ ಕಲಂ ನಂ 12(2) ರಲ್ಲಿ ಅಲೀಮಾ ಬೀ ರವರ ಹೆಸರು ಹೊರತು ಪಡಿಸಿ ನಿಮ್ಮ ತಾಯಿಯ ಹೆಸರು ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ 2 ಕ್ಕೆ ಸಂಬಂದಪಟ್ಟಂತೆ ವಾದಿಯು ಊರಿಗೆ ಹೋಗಿದ್ದಾಗ ದಿನಾಂಕ 15.12.2020 ರಂದು ಮನೆಯ ಬಾಗಿಲನ್ನು ಹೊಡೆದು ಅತಿಕ್ರಮ ಪ್ರವೇಶ ಮಾಡಲು ಪ್ರಯತ್ತಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಿನ ಪೋಲಿಸರು ಪಂಚಾಯಿತಿ ದಾರರು ಹಾಗೂ ಗ್ರಾಮಸ್ಥರು ಅಲ್ಲಿಗೆ ಬಂದಿದ್ದರು ಎಂದರೆ ಸರಿಯಲ್ಲ. ಪೋಲಿಸರು ಪಂಚಾಯಿತಿ ದಾರರು ಹಾಗೂ ಗ್ರಾಮಸ್ಥರು ಅ ದಿನ ಸ್ಥಳಕ್ಕೆ ಬಂದಿದ್ದರು ಎಂದು ಅಸಲು ದಾವಾ 230/2023 ರಲ್ಲಿ ಒಪ್ಪಿಕೂಂಡಿರುತ್ತೀರಿ ಎಂದರೆ ಸರಿಯಲ್ಲ. ನಿಡಿ 2 ಮತ್ತು 3 ನೋಂದಣಿಯಾಗುವ ಕಾಲಕ್ಕೆ ಸಾಕ್ಷಿದಾರರಾಗಿ ಯಾರು ಇದ್ದರು ಎಂದರೆ ಗೊತ್ತಿಲ್ಲ. ದಾವಾ ಅಸ್ತಿಗಳಲ್ಲಿ ವಾದಿಯೇ ಸಾವಧೀನ ಇರುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ತಂದೆ ಇದ್ದಿಲು ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ . ನಿಮ್ಮ ತಂದೆಗೆ ದಾವಾ ಐಟಂ ನಂ 1 ನ್ನು ಖರೀದಿ ಮಾಡುವ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ಅಗಾಗಿ ನಿಡಿ 2 ನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ವಾದಿಯ ಸಾವಧೀನಕ್ಕೆ ಅಡ್ಡಿ ಪಡಿಸಿದ ಕಾರಣ ಈ ದಾವಾ ಹಾಕಿರುತ್ತಾರೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ– ಇಲ್ಲ.</u>**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)***

**ಓದಿ ಹೇಳಿ ಕೇಳಿ ಸರಿ ಇದೆ,**

***sd/-***

***(ಹರೀಶ್. ಜಿ )***

**ಪ್ರಧಾನ ಸಿವಿಲ್ ನ್ಯಾಯಾಧೀಶರು,**

**ಮತ್ತು ಜೆಎಂಎಫ್ ಸಿ, ಮುಳಬಾಗಿಲು**